ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

No. ಇ.ಜಿ.1/ಸಿಆರ್–30/2015–16

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ .ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು, ದಿನಾಂಕ: 18/09/2019

**ವಾಣಿಜ್ಯ ತೆರಿಗೆಗಳ ಆಯುಕ್ತರವರ ಸುತ್ತೋಲೆ ಸಂಖ್ಯೆ: 4/2019–2020**

ವಿಷಯ: ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ಮತ್ತು ಕೇಂದ್ರ ಮಾರಾಟ ತೆರಿಗೆ ಅಡಿ ನೋಂದಣಿ ಪ್ರಮಾಣ ಪತ್ರಗಳನ್ನು ನೀಡುವ ಕುರಿತು.

----

ಜುಲೈ 1, 2017ರಿಂದ ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆಯನ್ನು ಅನುಷ್ಠಾನಗೊಳಿಸಿದ್ದು, ಪೆಟ್ರೋಲಿಯಂ ಪದಾರ್ಥಗಳಾದ ಕಚ್ಚಾ ತೈಲ (Petroleum Crude), ಮೋಟಾರ್ ಸ್ಪಿರಿಟ್ (Motor Spirit) (ಪೆಟ್ರೋಲ್) (Petrol), ಹೈ ಸ್ಪೀಡ್ ಡೀಸೆಲ (High Speed Diesel), ನೈಸರ್ಗಿಕ ಅನಿಲ (Natural Gas), ವೈಮಾನಿಕ ಇಂಧನ (Aviation Turbine Fuel) ಹಾಗೂ ಮಾದಕ ಪಾನೀಯಗಳು (Liquor for human consumption) ಗಳನ್ನು **ಹೊರತುಪಡಿಸಿ** ಇನ್ನುಳಿದ ಎಲ್ಲಾ ಸರಕುಗಳು ಮತ್ತು ಸೇವೆಗಳು ಸರಕು ಮತ್ತು ಸೇವಾ ತೆರಿಗೆಯ ವ್ಯಾಪ್ತಿಗೊಳಪಡುತ್ತವೆ.

ಮೇಲೆ ನಮೂದಿಸಿದ ಪೆಟ್ರೋಲಿಯಂ ಪದಾರ್ಥಗಳು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957ರ ಅಡಿ ತೆರಿಗೆಗೊಳಪಡುವುದನ್ನು ಮುಂದುವರೆಸಲಾಗಿದೆ. ಆದುದರಿಂದ ಪೆಟ್ರೋಲಿಯಂ ಪದಾರ್ಥಗಳು ಖರೀದಿ ಮತ್ತು ಮಾರಾಟ ಮಾಡುವ ವ್ಯಾಪಾರಿಗಳು ದಿನಾಂಕ: 01/07/2017ಕ್ಕಿಂತ ಮೊದಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಡಿ ನೋಂದಾಯಿತ ವ್ಯಾಪಾರಿಗಳಾಗಿದ್ದಲ್ಲಿ ಜುಲೈ 1, 2017ರ ನಂತರವೂ ಸಹಿತ ಸದರಿ ಸರಕುಗಳನ್ನು ಅಂತರಾಜ್ಯದಲ್ಲಿ ಖರೀದಿಸಿ ರಾಜ್ಯದಲ್ಲಿ ಮಾರಾಟ ಮಾಡಿದಲ್ಲಿ ಅಂತಹ ಮಾರಾಟದ ವಹಿವಾಟು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಡಿ ತೆರಿಗೆ ಬಾಧ್ಯತೆಗೊಳಪಡುತ್ತದೆ. ಈ ರೀತಿಯಾಗಿ ಅಂತರಾಜ್ಯದಲ್ಲಿ ಖರೀದಿಸಿದ ನಮೂದಿತ ಸರಕುಗಳಿಗೆ ಕೇಂದ್ರ ಮಾರಾಟ ತೆರಿಗೆ ಅಧಿನಿಯಮದ ಪ್ರಕರಣ 8(3)(ಬಿ)ರ ಅನ್ವಯ ರಿಯಾಯಿತಿ ದರದ ಕೇಂದ್ರ ಮಾರಾಟ ತೆರಿಗೆ ಶೇಕಡ 2 ರಂತೆ ಅನ್ವಯವಾಗುತ್ತದೆ. ಆದರೆ ರಾಜ್ಯದಲ್ಲಿಯ ನೋಂದಾಯಿತ ವರ್ತಕರು, ಹೊರರಾಜ್ಯದ ಮಾರಾಟ ಮಾಡುವ ವ್ಯಾಪಾರಿಗಳಿಗೆ ನಿಗದಿತ ಘೋಷಣೆ ನಮೂನೆ – ಸಿ ಯನ್ನು (Declaration in Form-C) ಸಂಬಂಧಪಟ್ಟ ನೋಂದಣಿ ಅಧಿಕಾರಿಗಳಿಂದ ಪಡೆದುಕೊಂಡು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪೆಟ್ರೋಲಿಯಂ ಕಚ್ಚಾ ತೈಲ (ಕ್ರೂಡ್), ಮೋಟಾರ್ ಸ್ಪಿರಿಟ್ (ಪೆಟ್ರೋಲ್), ಹೈ ಸ್ಪೀಡ್ ಡೀಸೆಲ್, ನೈಸರ್ಗಿಕ ಅನಿಲ ಮತ್ತು ವೈಮಾನಿಕ ಇಂಧನ ಹಾಗೂ ಮಾದಕ ಪಾನೀಯಗಳು (Liquor for human consumption) ಗಳಲ್ಲಿ ಯಾವುದಾದರೂ ಸರಕುಗಳ ವ್ಯವಹಾರ ಮಾಡುತ್ತಿರುವ ಬಗ್ಗೆ ಹೊಸದಾಗಿ ನೋಂದಣಿ ಪಡೆದುಕೊಳ್ಳಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಡಿ ಮತ್ತು ಕೇಂದ್ರ ಮಾರಾಟ ತೆರಿಗೆ ಅಧಿನಿಯಮದಡಿ ನೋಂದಣಿಗಾಗಿ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆ. ಕರ್ನಾಟಕ ಮಾರಾಟ ತೆರಿಗೆಯ ನೋಂದಣಿ ಪ್ರಕ್ರಿಯೆ, ರಿಟರ್ನ್ ಸಲ್ಲಿಸುವಿಕೆಗಳು ವಿದ್ಯುನ್ಮಾನ ವಿಧಾನದಲ್ಲಿ ಈವರೆಗೆ ಇರಲಿಲ್ಲವಾದ್ದರಿಂದ ಪ್ರಸ್ತುತ ಆನ್‌ಲೈನ್ ಮೂಲಕ ನೋಂದಣಿ ಪ್ರಮಾಣ ಪತ್ರವನ್ನು ನೀಡುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಆದರೆ ಅರ್ಜಿದಾರರು ನೋಂದಣಿಗಾಗಿ ಅರ್ಜಿಯನ್ನು ಭೌತಿಕವಾಗಿ ಕರ್ನಾಟಕ ಮಾರಾಟ ತೆರಿಗೆ (ನೋಂದಣಿ ಮತ್ತು ವಹಿವಾಟು) ನಿಯಮಾವಳಿಯ ನಮೂನೆ–1 ಮತ್ತು ಕೇಂದ್ರ ಮಾರಾಟ ತೆರಿಗೆ ನಿಯಮಾವಳಿಯ ಅಡಿ ನಿಗದಿಪಡಿಸಿದ ನಮೂನೆ–ಎ ರಲ್ಲಿ ಸಂಬಂಧಪಟ್ಟ ಕ್ಷೇತ್ರೀಯ ಸರಕು ಮತ್ತು ಸೇವಾ ತೆರಿಗೆ ಅಧಿಕಾರಿಗಳಿಗೆ ಸಲ್ಲಿಸುತ್ತಾರೆ. ಸದರಿ ಅಧಿಕಾರಿಗಳು ಭೌತಿಕವಾಗಿ ಸಲ್ಲಿಸಿದ ಅರ್ಜಿಯಲ್ಲಿರುವ ವಿವರಗಳನ್ನು ಗಣಕ ಯಂತ್ರದಲ್ಲಿ ನಮೂದಿಸಿ ನೋಂದಣಿ ಪ್ರಮಾಣ ಪತ್ರವನ್ನು ಗಣಕಯಂತ್ರದ ವ್ಯವಸ್ಥೆಯಿಂದಲೇ ಪಡೆದು ದೃಢೀಕರಿಸಿ ನೀಡಬೇಕಾಗಿರುತ್ತದೆ. ಕೇಂದ್ರ ಮಾರಾಟ ತೆರಿಗೆ

ಅಧಿನಿಯಮದಡಿ ನೀಡಲ್ಪಡುವ ಪ್ರಮಾಣ ಪತ್ರದಲ್ಲಿ ಅಂತರಾಜ್ಯದಲ್ಲಿ ಖರೀದಿಸಲು ಇಚ್ಛಿಸಿದ ಸರಕುಗಳನ್ನು ನಿಖರವಾಗಿ ಆಯಾ ಉದ್ದೇಶಗಳಡಿ ಸರಕು ಮತ್ತು ಸೇವಾ ತೆರಿಗೆ ಅಧಿಕಾರಿಗಳು ಗಣಕಯಂತ್ರದಲ್ಲಿ ನಮೂದಿಸಿ ನೋಂದಣಿ ಪ್ರಮಾಣ ಪತ್ರವನ್ನು ಸೃಜಿಸಿ ಪಡೆದು ರುಜು ಮಾಡಿ ಕೊಡತಕ್ಕದ್ದು. ಈ ಘಟಕವು ಸರಕು ಮತ್ತು ಸೇವಾ ತೆರಿಗೆ ಅಧಿಕಾರಿಗಳು ಇಲಾಖೆಯ ಜಾಲತಾಣ http://vat.kar.nic.in/cto ದಲ್ಲಿ ಲಾಗಿನ್ ಆಗಿ ಪಥ Main Page →e-Reg→ KST/CST Reg →New Registration ರಲ್ಲಿ ಲಭ್ಯವಿರುತ್ತದೆ.

ಏಪ್ರಿಲ್ 1, 2005 ರಿಂದ ಮೌಲ್ಯವರ್ಧಿತ ತೆರಿಗೆಯನ್ನು ಅಳವಡಿಸುವುದಕ್ಕಿಂತ ಮೊದಲು (ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ಮತ್ತು ಕೇಂದ್ರ ಮಾರಾಟ ತೆರಿಗೆ ಅಡಿಯ ನೋಂದಣಿ ಸಂಖ್ಯೆಗಳ ವಿವರಗಳುಳ್ಳ ಗಣಕೀಕೃತ ದಾಖಲೆಯಲ್ಲಿರುವ ನೋಂದಣಿ ಸಂಖ್ಯೆಗಳನ್ನು ನೀಡಲಾಗುತ್ತಿತ್ತು. ಮಾರಾಟ ತೆರಿಗೆ ಆಡಳಿತದಿಂದ ಮೌಲ್ಯವರ್ಧಿತ ತೆರಿಗೆ ಆಡಳಿತ ಪದ್ಧತಿಗೆ ಸ್ಥಿತ್ಯಂತರಗೊಳ್ಳುವಾಗ ನೋಂದಣಿ ಸಂಖ್ಯೆ ವಿವರಗಳುಳ್ಳ ಗಣಕೀಕೃತ ದಾಖಲೆಯನ್ನು ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಎಂದು ಪ್ರಭಾರ ವಹಿಸಿಕೊಂಡ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರಿಗೆ ಹಸ್ತಾಂತರ ಮಾಡಲಾಗಿತ್ತು, ಆದರೆ ದಿನಾಂಕ: 19/09/2019ರಿಂದ ಆನ್‌ಲೈನ್ ಮೂಲಕ ಮಾತ್ರ ನೋಂದಣಿ ಪ್ರಮಾಣ ಪತ್ರವನ್ನು ಸೃಜಿಸಿ ನೀಡತಕ್ಕದ್ದು. ಯಾವುದೇ ಕಾರಣಕ್ಕೂ ದಿನಾಂಕ: 01/05/2005ಕ್ಕಿಂತ ಮೊದಲು ಒದಗಿಸಿದ ನೋಂದಣಿ ಸಂಖ್ಯೆಗಳ ವಿವರಗಳುಳ್ಳ ಗಣಕೀಕೃತ ದಾಖಲೆಯಲ್ಲಿರುವ ನೋಂದಣಿ ಸಂಖ್ಯೆಯನ್ನು ನೀಡತಕ್ಕದ್ದಲ್ಲ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಆನ್‌ಲೈನ್ ಮೂಲಕ ನೋಂದಣಿ ಪ್ರಮಾಣ ಪತ್ರವನ್ನು ಸೃಜಿಸಿ ನೀಡುವ ಪ್ರಕ್ರಿಯೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಕ್ರಮ ಕೈಗೊಳ್ಳತಕ್ಕದ್ದು.

(ಶ್ರೀಕರ್ ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ಇವರಿಗೆ:

ರಾಜ್ಯದ ಎಲ್ಲಾ ಅಧಿಕಾರಿಗಳಿಗೆ.